ಮಾತನ್ನು ಒಪ್ಪಿಕೊಂಡ. ತಪ್ಪು ದಾರಿಯಲ್ಲಿ ನಡೆಯುತ್ತಿದ್ದ ತನ್ನನ್ನು ಹಿತವಾಗಿ ತಿದ್ದಿ ತೀಡಿದ ಹೆಂಡತಿಯ ಬಗ್ಗೆ ಅವನಿಗೆ ಇನ್ನಷ್ಟು ಪ್ರೀತಿ ಉಕ್ಕಿತು. ಆ ಪ್ರೀತಿಯ ಸೆಳೆತದೊಂದಿಗೆ ಹುಟ್ಟಿದರು ಇಬ್ಬರು ಮಕ್ಕಳು. ಶಾಹಿನ್ ನಂತರ ಶಹೀದಾ. ಅಲ್ಲಾಹು ನಮಗೆ ಇಬ್ಬರು ಮಕ್ಕಳನ್ನು ಕೊಟ್ಟಿದ್ದಾನೆ. ಇಂದಿನ ಕಾಲದಲ್ಲಿ ಇಬ್ಬರೇ ಮಕ್ಕಳು ಸಾಕು. ಆ ಇಬ್ಬರನ್ನೇ ಚೆನ್ನಾಗಿ ಬೆಳೆಸಬೇಕು. ಇಬ್ಬರಿಗೂ ಒಳ್ಳೆಯ ವಿದ್ಯಾಭ್ಯಾಸ ಕೊಟ್ಟು ಸುಸಂಸ್ಕೃತರನ್ನಾಗಿಸಬೇಕು. ನಾವಂತೂ ಗಂಡ–ಹೆಂಡತಿ ಓದಿಲ್ಲ. ಮಕ್ಕಳು ಅವಿದ್ಯಾವಂತರಾಗುವುದು ಬೇಡ ಎಂದು ಇಬ್ಬರನ್ನೂ ಸರಕಾರಿ ಶಾಲೆಗೆ ಸೇರಿಸಿದ್ದರು.

* * * *

ಕರೆಂಟು ಬಂತು, ಮೋಂಬತ್ತಿ ಸಂಪೂರ್ಣ ಉರಿದು ಹೋಗಿತ್ತು. ಸಂಪೂರ್ಣ ಉರಿದು ಖಾಲಿಯಾದ ಮೇಲೆ ಒಂದಷ್ಟು ಮೇಣ ಖಾಲಿ ಹರಡಿ ಬಿಟ್ಟಿತ್ತು. ಅವಳು ಅದನ್ನು ತೆಗೆದು ಸ್ವಚ್ಛಗೊಳಿಸಿದಳು. ಮಗಳು ಶಹೀದಾಳಿಗಂತೂ ಮೊದಲ ನೋಂಬು. ಆಯಿಷಾ, 'ನೀನು ನೋಂಬು ಹಿಡಿಯುವುದು ಬೇಡ ಮೋಳೇ. ಸಂಜೆಯ ತನಕ ಹಸಿವಿನಿಂದ ಇರುವುದು ಸಾಧ್ಯವಿಲ್ಲ. ನಡುವೆ ಬಾಯಾರಿಕೆ ಆಗುತ್ತೆ. ಹೊಟ್ಟೆ ಚುರುಗುಡುತ್ತೆ' ಅಂದರೂ ಕೇಳದೆ. ನೋಂಬು ಹಿಡಿದಿದ್ದಳು. ನಡುವೆ ಒಂದೆರಡು ಸಲ ಬಾಯಾರಿಕೆಯಾದರೂ ಗಟ್ಟಿ ಮನಸು ಮಾಡಿ ನೋಂಬು ಬಿಟ್ಟಿರಲಿಲ್ಲ. ಮಗಳ ಮುಖ ನೋಡಿ ಆಯಿಷಾಳ ಮನಸ್ಸು ಚುರುಗುಟ್ಟಿ ಒಮ್ಮೆ ಸಂಜೆ ಆಗಿ ಬಿಡಲಪ್ಪಾ, ಮಗ್ ರಿಬ್ ನಮಾಜಿನ ಅಝಾನ್ ಕೇಳಿಸಿ ಬಿಡಲಪ್ಪಾ ಎಂದು ಗಳಿಗೆಗೊಮ್ಮೆ ಗಂಟೆ ನೋಡುತ್ತಾ ಸಂಜೆ ಮಗ್‌ರಿಬ್ ನಮಾಜಿನ ಅಝಾನ್ ಆಗುತ್ತಿದ್ದಂತೆ ಹಸಿದಿರುವ ಮಗಳು, ಮಗ ಹೊಟ್ಟೆ ತುಂಬಿಸಿಕೊಂಡಾಗ ನಿರಾಳವಾಗಿ ನಿಟ್ಟುಸಿರು ಬಿಟ್ಟಳು.

****

ದಿನಗಳು ಹೀಗೆ ಸಾಗುತ್ತಿದ್ದವು. ರಮ್ ಝಾನ್ ತಿಂಗಳು ಮುಗಿಯುತ್ತಾ ಬಂದಿತ್ತು. ಇನ್ನೇನು ಪೆರ್ನಾಲ್ ಐದಾರು ದಿನ ಇದೆ ಅನ್ನುವಾಗ ಒಂದ ದಿನ ಹುಸೇನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೊಸಬಟ್ಟೆ ತರಲು ಪೇಟೆಗೆ ಹೋದ. ಹೆಂಡತಿ, ಮಕ್ಕಳು, ತಾಯಿಗೆ ಬೇಕಾದ ಬಟ್ಟೆಗಳನ್ನೆಲ್ಲಾ ಖರೀದಿಸಿ ಕೊಂಡು ಅವರು ಹಿಂದಿರುಗುವಾಗ ಗಂಟೆ ಮೂರಾಗಿತ್ತು. ಮಕ್ಕಳಿಗಂತೂ ಎರಡೆರಡು ಜೊತೆ ಬಟ್ಟೆ ಖರೀದಿಸಿದ್ದ. ಹೊಸ ಬಟ್ಟೆಗಳನ್ನು ಮಕ್ಕಳು ಅಜ್ಜಿಯ ಮುಂದೆ ತಂದು, 'ಅಜ್ಜೀ ಹೇಗಿದೆ ನಮ್ಮ ಪೆರ್ನಾಲ್ ಹೊಸಬಟ್ಟೆ?' ಎಂದು ಕೇಳಿದಾಗ ಅಜ್ಜಿ ಮೊಮ್ಮಕ್ಕಳನ್ನು ಮುದ್ದು ಮಾಡುತ್ತಾ, 'ತುಂಬಾ ಚೆನ್ನಾಗಿದೆ ಕಣ್ರೋ, ಈಗಲೇ ಹಾಕಿ ಹಾಳು ಮಾಡಬೇಡಿ. ಪೆರ್ನಾಲ್ ತನಕ ಜಾಗ್ರತೆ ಯಾಗಿರಲಿ' ಎಂದಾಗ 'ಹುಂ ಅಜ್ಜಿ. ನಾವು ಇದನ್ನು ಪೆರ್ನಾಲ್‌ಗೆ ಧರಿಸಿರೋದು' ಎಂದು ಸುಕ್ಕಾಗದಂತೆ ಕೊಂಡೊಯ್ದು ಅಮ್ಮನ ಕೈಲಿ ಕೊಟ್ಟರು.

ಅಂದು ಪೆರ್ನಾಲ್‌ನ ಮುನ್ನಾದಿನ. ಹುಸೇನ ಸೈಕಲಿಗೆ ಬುಟ್ಟಿ ಏರಿಸಿಕೊಂಡು ಹೊರಡುವಾಗ ಆಯಿಷಾಳೊಡನೆ ಕೇಳಿದ, 'ಪೆರ್ನಾಲ್‌ಗೆ ಏನೇನು ತರಬೇಕು'.

'ಕೋಳಿ ಮಾಂಸ, ಗಂಧಸಲೆ, ಅಕ್ಕಿ, ತುಪ್ಪ, ಸೇವಿಗೆ, ಗೋಡಂಬಿ ಹೀಗೆ ಬೇಕಾದ ದಿನಸಿ ಸಾಮಾನುಗಳನ್ನು ಒಂದು ಚೀಟಿಯಲ್ಲಿ ಬರೆದು ಗಂಡನ ಕೈಗೆ ಕೊಟ್ಟಳು. ಅವನು ಹೋಗುತ್ತಿದ್ದಂತೆ ಆಯಿಷಾಳಿಗೆ ಏನೋ ಅಪಶಕುನ ವಾದಂತೆ ಎದೆ ನಡುಗಿತು. ತನಗರಿವಿಲ್ಲದಂತೆ ಕಣ್ಣಿಂದ ಒಂದು ತೊಟ್ಟು ಕಂಬನಿ ಹರಿಯಿತು. ಅಷ್ಟರಲ್ಲಿ ಮಗಳು ಶರೀನಾ ಕೇಳಿದಳು.

'ಉಮ್ಮ, ನೋಂಬು ಇವತ್ತಿಗೆ ಮುಗಿಯುತ್ತಾ'

'ಹೌದು ಮೋಳೇ. ಇವತ್ತಿಗೆ ನೋಂಬು ಮುಗಿಯುತ್ತೆ.ಅದಕ್ಕೆ ನಾವು ನಾಳೆ ಪೆರ್ನಾಲ್ ಆಚರಿಸೋದು!'

## ನಂಟು

ಈ ಪ್ರೀತಿಯೆಂಬ  ನೋಟು
ಅಮಾನ್ಯಗೊಂಡರೂ
ಒಂದು ರೀತಿಯ ಬೆಲೆಯುಂಟು
ಕಾರಣ ಹೃದಯ ಖಜಾನೆಯ ನಂಟು

★ **ಫಾಲನೇತ್ರ, ಗಂಗಪ್ಪ ಸಜ್ಜನ**




ಈಶ್ವರ

'ಪೆರ್ನಾಲ್‌ಗೆ ಏನೇನು ಮಾಡುತ್ತೀಯಾ?'

'ಗಂಧ ಸತಿ ಅಕ್ಕಿಯ ತುಪ್ಪದ ಅನ್ನ, ಕೋಳಿಯ ಸಾರು, ಕೋಳಿ ಫ್ರೈ, ಸೇವಿಗೆ ಪಾಯಸ, ಇಡ್ಲಿ–ದೋಸೆ. ಇನ್ನು ಏನೇನೋ. ಗಡದ್ದಾಗಿರಬೇಕು ಪೆರ್ನಾಲ್ ಹಾಗೇ ಮಾಡೋಣ. ಒಟ್ಟಿನಲ್ಲಿ ನೀವೆಲ್ಲರೂ ಖುಷಿಯಿಂದ ಇರಬೇಕು!'

****

ಪ್ರತಿದಿನವೂ ಹುಸೇನ ಧಕ್ಕೆಗೆ ಹೋಗಿ ಮೀನು ತಂದು ಊರೆಲ್ಲಾ ಮಾರಾಟ ಮಾಡಿ ಮನೆಗೆ ಮಧ್ಯಾಹ್ನ ಮೂರರ ಹೊತ್ತಿಗೆ ಬರುತ್ತಿದ್ದ. ಆದರೆ ಅಂದು ಗಂಟೆ ಮೂರಾದರೂ ಅವನು ಬಂದಿರಲಿಲ್ಲ. ಆಯಿಷಾಳಿಗೆ ಆತಂಕವಾಗ ತೊಡಗಿತ್ತು. ಅವಳ ಎದೆ ಢವ ಢವ ಹೊಡೆದು ಕೊಳ್ಳತೊಡಗಿತು. ಒಳಗಿನಿಂದ ಅತ್ತೆ ಹೊರಬಂದು, 'ಆಯಿಷಾ, ಇನ್ನೂ ಹುಸೇನ ಬಂದಿಲ್ಲವೇನೇ?' ಎಂದು ಕೇಳಿದಳು.

'ಇನ್ನೂ ಇಲ್ಲ ಅತ್ತೆ' ಎಂದವಳಿಗೆ ದೂರದಿಂದ ಯಾರೋ ಓಡಿ ಬರುವುದು ಕಾಣಿಸಿತು. ನೋಡಿದರೆ ಅವನು ಆಚೆ ಮನೆಯ ಖಾದರ್‌ನ ಮಗ. ಓಡಿ ಬಂದವನೇ ಏದುಸಿರು ಬಿಡುತ್ತಾ, 'ಆಂಟಿ ಮಂಗಳೂರಿನಲ್ಲಿ ತುಂಬಾ ಗಲಾಟೆಯಂತೆ. ಹಿಂದೂಗಳಿಗೂ ಮುಸಲ್ಮಾನರಿಗೂ ಹೊಡೆದಾಟ ಸುರುವಾಗಿದೆಯಂತೆ. ಎಲ್ಲರ ಕೈಯಲ್ಲೂ ಕತ್ತಿ, ಮಚ್ಚು ಇದೆಯಂತೆ. ಆ ಗಲಾಟೆಯಲ್ಲಿ ಎಷ್ಟೋ ಮಂದಿ ಸಿಕ್ಕಿಕೊಂಡು ಗಾಯಗೊಂಡು ಆಸ್ಪತ್ರೆ ಸೇರಿದಾರಂತೆ' ಎಂದವ ಮತ್ತೆ ಕೇಳಿದ, 'ಹುಸೇನಾರ ಬಂದಿದ್ದಾರೆಯೇ?'

'ಇನ್ನೂ ಇಲ್ಲ ಕಣೋ. ಯಾವತ್ತೂ ಮೂರು ಗಂಟೆಗೆ ಬರುತ್ತಿದ್ದವರು ಇನ್ನೂ ಆರಾದರೂ ಮನೆಗೆ ಬಂದಿಲ್ಲ. ನನಗೆ ಭಯವಾಗುತ್ತಿದೆ ಕಣೋ' ಎಂದಳು ಆಯಿಷಾ.

'ಫೋನು ಮಾಡಿ ನೋಡುತ್ತೇನೆ' ಎಂದು ತನ್ನ ಕಿಸೆಯಿಂದ ಮೊಬೈಲು ತೆಗೆದು ಹುಸೇನನ ನಂಬರಿಗೆ ಫೋನು ಮಾಡಿದ. ಅತ್ತ ಕಡೆ ಫೋನ್ ಸ್ವಿಚ್ ಆಫ್ ಆಗಿತ್ತು. ಎರಡು ಮೂರು ಸಲ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅವನು ಗಾಬರಿಗೊಂಡವನಂತೆ ಹೇಳಿದ. 'ಆಂಟಿ ಫೋನ್ ಸ್ವಿಚ್ ಆಫ್ ಆಗಿದೆ. ಏನಾಗಿದೆಯೋ ಗೊತ್ತಿಲ್ಲ'.

ಅವಳ ಎದೆ ಇನ್ನಷ್ಟು ಹೊಡೆದು ಕೊಳ್ಳ ತೊಡಗಿತು. ಒಮ್ಮೆಲೆ ಕುಸಿದು ಕುಳಿತು ಅಳ ತೊಡಗಿದಳು. ಆ ಹುಡುಗ ಹೇಳುತ್ತಿದ್ದುದನ್ನು ಕೇಳುತ್ತಿದ್ದ ಹುಸೇನನ ತಾಯಿ ಸೊಸೆಯೊಂದಿಗೆ, 'ಯಾ ಅಲ್ಲಾಹ್. ನನ್ನ ಮಗನಿಗೆ ಏನಾಗಿದೆಯೋ?' ಎಂದು ಬೊಬ್ಬಿಡುತ್ತಾ ಎದೆ ಬಡಿದುಕೊಳ್ಳತೊಡಗಿದರು. ಅಮ್ಮ–ಅಜ್ಜಿ ಹೀಗೆ ಕುಸಿದು ಬಿದ್ದು ಅಳುತ್ತಿದ್ದುದನ್ನು ಕಂಡು ಮಕ್ಕಳಿಬ್ಬರೂ ಏನೊಂದೂ ಅರ್ಥವಾಗದೇ ಅವರೊಂದಿಗೆ ಅಳತೊಡಗಿದರು.

****

ಸಂಜೆ ಮಗ್‌ರಿಬ್ ನಮಾಜಿನ ಅಝಾನ್ ಕೇಳಿಸುವ ಹೊತ್ತು ಆಗುತ್ತಾ ಬಂದಿತು. ಆದರೆ ಹುಸೇನನ ಸುಳಿವು ಇನ್ನೂ ಇರಲಿಲ್ಲ. ಪದೇ ಪದೇ ಫೋನು ಮಾಡಿದರೂ ಅವನ ಫೋನಿನಿಂದ ಪ್ರತಿಕ್ರಿಯೆಯೇ ಇರಲಿಲ್ಲ. ಹತ್ತಿರದ ಮನೆಯವರು ಆ ಮನೆಗೆ ಎಡತಾಕಿ ಅತ್ತೆ–ಸೊಸೆಯನ್ನು ಸಮಾಧಾನಿಸ ತೊಡಗಿದರು. ಇನ್ನೇನು ನೋಂಬು ಬಿಡುವ ಹೊತ್ತು. ನಾಳೆ ಪೆರ್ನಾಲ್ ಎಂಬ ಗಡಿಬಿಡಿಯಿಂದ ಅವರೆಲ್ಲಾ ತಮ್ಮ ತಮ್ಮ ಮನೆಗೆ ಸಾಗಿದರು. ಅಷ್ಟು ಹೊತ್ತಿನಲ್ಲಿ ಮಗ್‌ರಿಬ್ ನಮಾಜಿನ ಅದಾನ್ ಕೇಳಿಸಿ ಆಯಿಷಾ ಮಗಳಿಗೆ ಪತ್ತಿರ್, ಶರಬತ್ತ್, ಬಾಳೆ ಹಣ್ಣು, ಖರ್ಜೂರ ಕೊಟ್ಟಳು. ಅವರಾರಿಗೂ ರಂಜಾನ್ ತಿಂಗಳ ಕೊನೆಯ ನೋಂಬು ಅಷ್ಟು ಉಲ್ಲಾಸದಾಯಕವಾಗಿರಲಿಲ್ಲ. ಆಯಿಷಾಳಿಗೆ ಯಾವುದರಲ್ಲೂ ಉತ್ಸಾಹವೇ ಇರಲಿಲ್ಲ. ಏನೂ ಮಾಡದೇ ಬಾಗಿಲ ಬಳಿಯ ಕುಳಿತು ಕೊಂಡು ಹೊರಗಿನ ದಾರಿಯನ್ನೇ ನೋಡತೊಡಗಿದಳು.

ಸ್ವಲ್ಪ ಹೊತ್ತಿನಲ್ಲಿ ಮತ್ತೆ ಖಾದರ್‌ನ ಮಗ ಮತ್ತೆ ಒಂದಿಬ್ಬರು ಅವಳಿಗೆ ಇನ್ನಷ್ಟು ಭಯ ಹುಟ್ಟಿಸುವಂತೆ ಹುಸೇನ ಇನ್ನೂ ಬರದಿರುವುದನ್ನು ಕಂಡು, 'ಮಂಗಳೂರಿನ ಗಲಾಟೆಯಲ್ಲಿ ನಾಲ್ಕೈದು ಹೆಣ ಬಿದ್ದಿದೆಯಂತೆ. ಪೇಟೆ ತುಂಬಾ ಪೊಲೀಸರೇ ತುಂಬಿಕೊಂಡಿದ್ದಾರಂತೆ. ಪರಿಸ್ಥಿತಿ ಯಾವ ಹಂತಕ್ಕೆ ಹೋಗುತ್ತೋ ಗೊತ್ತಾಗ್ತಿಲ್ಲ' ಅಂದರು. ಸಮಯ ಮೀರುತ್ತಿತ್ತು. ಅಷ್ಟು ಹೊತ್ತಿಗೆ ಹತ್ತಿರದ ಮನೆಗಳ ಸಾರಮ್ಮ, ಖತೀಜಮ್ಮ, ಇಲ್ಲಿ ತಾಯಿ, ಸೊಸೆ ಮಕ್ಕಳು ಏನೂ ತಿಂದಿಲ್ಲ ಎಂಬುದರ ಅರಿವಾಗಿ ತಮ್ಮ ಮನೆಯಲ್ಲಿ ಮಾಡಿದ್ದ ಪತ್ತಿರ್, ಕಡುಬು, ಕೋಳಿ